ಬಂದಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾರೆ. ಪೈರೆಕ್ಟೋರೇಟ್‌ನಲ್ಲಿ ನಿ.ಆರ್ಸ್. ಇರುವಾಗ ಈ ಮಾದ ಸರಿಯೇ ? ಆದ್ದರಿಂದ ಈ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಇಂಥದೇ ಒಂದು ಪ್ರೊಮೋಷನ್ ಕೇಸಿನಲ್ಲಿ ಒಂದು ಪಾರದೊಳಗಾಗಿ ಪ್ರೊಮೋಷನ್ ಬರುವುದೆಂದು ಗೊತ್ತಿದ್ದೂ ಡಾ॥ ರಾಮಚಂದ್ರ ಎಂಬ ವೈದ್ಯರೊಬ್ಬರನ್ನು ಬಾಗಲಕೋಟೆ ತಾಲ್ಲೂಕಿಗೆ ವರ್ಗಾಯಿಸಿದ್ದು, ಅವರು ಅಲ್ಲಿ ಮೂರು ದಿವಸಗಳು ಇದ್ದ ನಂತರ ಅವರನ್ನು ಪ್ರೊಮೋಷನ್ ಮೇಲೆ ಬೆಂಗಳೂರಿಗೆ ವರ್ಗಾಯಿಸುವುದರ ಔಚಿತ್ಯವೇನು ? ಹಾಗೂ ಅವರು ಹೋಗಿ ಬರಲು ಎಷ್ಟು ಟಿ.ಎ. ಕೊಟ್ಟಿದ್ದೀರಿ ತಿಳಿಸಬೇಕು. ಅಲ್ಲದೆ ಸದರಿ ವೈದ್ಯರು ನಗರವಲ್ಲೇ ಇದ್ದು ಆಲ್ಲಿಗೆ ಹೋಗಿದ್ದಾರೆ. ನಗರಗಳ ಹೊರಗೆ ಕೆಲಸ ಮಾಡಿದ ಪ್ರಾಮಾಣಿಕ ವೈದ್ಯರುಗಳನ್ನು ನಿವೃತ್ತರಾಗುವ ಪೂರ್ವದಲ್ಲಿ ನಗರಕ್ಕೆ ಕೇಳಿದರೂ ನಿರಾಕರಿಸುತ್ತಿದ್ದು. ಈ ರೀತಿಯ ಅನ್ಯಾಯ, ದುರಾಡಳಿತಕ್ಕೆ ಕಾರಣರಾರೆಂಬುದನ್ನು ಗೊತ್ತುಮಾಡಿ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪೆಚ್. ಟಿ. ಕೃಷ್ಣಪ್ಪ (ಆರೋಗ್ಯ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಸ್ವಾಮಿ, ಸೂಕ್ತ ಕ್ರಮ ಎಂದರೇನು ?

ಅಧ್ಯಕ್ಷರು.—ಸೂಕ್ತ ಕ್ರಮ ಎಂದರೆ ಎನ್‌ಕ್ವೈರಿ ಮಾಡಿಸುತ್ತೇನೆಂದು ಬೇಕಾದರೂ ಆಗಬಹುದು, ಬೇರೆ ಕಡೆ ವರ್ಗಾವಣೆ ಮಾಡಿಸುತ್ತೇನೆಂದು ಬೇಕಾದರೂ ಆಗಬಹುದು. ನಿಮ್ಮ ಪ್ರಶ್ನೆಗೆ ಸೂಕ್ತ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ.

(೧೪) ಹೊಸನಗರ ತಾಲ್ಲೂಕಿನಲ್ಲಿ ಗಂಳಮಾವು ಮರದ ತೊಗಟೆ ಕಳ್ಳ ಸಾಗಾಣಿಕೆಯಾಗುತ್ತಿರುವುದು

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ಮಲೆನಾಡು ಪ್ರದೇಶವಾಗಿದ್ದು ಕೆಲವು ಕಡೆ ದಟ್ಟವಾದ ಹೆಮ್ಮರಗಳು ಮತ್ತು ೨೦-೨೫ ಅಡಿ ಸುತ್ತಳತೆಯುಳ್ಳ ದೊಡ್ಡ ಜಾತಿಯ ಮರಗಳು ತುಂಬಿವೆ. ಸುಮಾರು ೧೦೦ ಅಡಿಗಳಿಗಿಂತಲೂ ಹೆಚ್ಚು ಎತ್ತರ ಬೆಳೆಯುವ ಗುಳಮಾವು ಎಂಬ ಮಲೆನಾಡಿನ ಹೆಸರು ಪಡೆದಿರುವ ಹಾಗೂ ನಾಟಾಗೆ ಉಪಯೋಗವಾಗುವಂತಹ ವಿಶೇಷ ಜಾತಿಯ ಮರಗಳು ಈ ಪ್ರದೇಶದಲ್ಲಿ ಬೆಳೆಯುತ್ತಿವೆ. ಇತ್ತೀಚೆಗೆ ಯಾವುದೋ ಕಾರಣದಿಂದ ಮೇಲ್ಕಂಡ ಗುಳಮಾವು ಮರದ ತೊಗಟೆಯನ್ನು ದೊಡ್ಡ ಪ್ರಮಾಣದಲ್ಲಿ ಕಳ್ಳಸಾಗಣೆಯಿಂದ ಲಾರಿಗಳ ಮೂಲಕ ಸಾಗಿಸುತ್ತಿದ್ದು ತೊಗಟೆಯನ್ನು ಬುಡದಿಂದ ಸುಮಾರು ಅರ್ಧ ಮರದವರೆಗೂ ತೆಗೆಯಲಾಗುತ್ತಿರುವುದರಿಂದ ಸದರಿ ಗುಳಮಾವು ಗಿಡಗಳು ನಾಶವಾಗಿ ಹೆಚ್ಚಿನ ಹೆಸರಿಲ್ಲದಾಗುವ ಪರಿಸ್ಥಿತಿ ಒದಗಿ ಬಂದಿದೆ. ಇದಕ್ಕೆ ಸರ್ಕಾರದ ಪರವಾನಗಿ ಇದೆಯೆ ? ಎಂಬುದನ್ನು ಈ ಸದನಕ್ಕೆ ತಿಳಿಸಬೇಕಾಗಿದೆ. ಅರಣ್ಯ ಇಲಾಖೆಯವರು ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಂತೆ ಕಂಡು ಬರುವುದಿಲ್ಲ. ನಾಟಾಗೆ ಉಪಯೋಗವಾಗುವ ಈ ಮರಗಳನ್ನು ಆಳಿಯದಂತೆ ಸರ್ಕಾರದವರು ಸೂಕ್ತ ಕ್ರಮವನ್ನು ಕೂಡಲೇ ಕೈಗೊಂಡು ತೊಗಟೆ ತೆಗೆಯುವುದನ್ನು ನಿಲ್ಲಿಸಲು ಅವಶ್ಯಕವಾದ ಕ್ರಮಗಳನ್ನು ಕೈಗೊಳ್ಳುವಂತೆ ಅರಣ್ಯ ಇಲಾಖಾ ಸಿಬ್ಬಂದಿಯವರಿಗೆ ಕೂಡಲೇ ನಿರ್ದೇಶನಗಳನ್ನು ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ. ಎಸ್. ಪೆ ಶಮಟ್ (ಗಣಿ ಹಾಗೂ ಅರಣ್ಯ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

(೧೫) ಪುತ್ತೂರಿಂ ಆಸ್ಪತ್ರೆಯನ್ನು ೧೦೦ ಹಾಸಿಗೆಯಿಂಳ್ಳ ಆಸ್ಪತ್ರೆಯಂನ್ನಾಗಿ ಪರಿವರ್ತಿಸುವುದು

ಶ್ರೀ ಏನಿಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪುತ್ತೂರು ತಾಲ್ಲೂಕು ಹಿಂದಿನಿಂದಲೂ ಸಬ್ ಡಿವಿಜನ್ ಸೆಂಟರ್ ಆಗಿದ್ದು ಬೆಳ್ತಂಗಡಿ, ಬಂಟ್ವಾಳ, ಸುಳ್ಯ, ತಾಲ್ಲೂಕಿಗೆ ಕೇಂದ್ರ ಸ್ಥಳವಾಗಿದೆ. ಈ ಪರಿಸರದಲ್ಲಿ ಜನರು ಪುತ್ತೂರು ಜಿಲ್ಲೆಯಾಗಬೇಕು ಎನ್ನುವ ಸಂದರ್ಭದಲ್ಲಿ ಹುಂಡೇಕರ್ ಸಮಿತಿಯವರು ಪುಟ್ಟ ಪಾಗೂ ಕಡಬ ತಾಲ್ಲೂಕು ಮಾಡಬೇಕು